- -                    ಅಸಲು ದಾವೆ ಸಂ: **9/2021**    ಡಿ.ಡಬ್ಲು **-1**

**ದಿ: 09-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎ ಆರ್ ಪಿ ವಕೀಲರಿಂದ:**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿದೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ವಾದಿ ನಂಬರ್ -1 ನನಗೆ ಅಣ್ಣನಾಗಬೇಕು. ವಾದಿ ನಂಬರ್-2 ರವರು ವಾದಿ ನಂಬರ್ 1 ರವರ ಹೆಂಡತಿಯಾಗಿರುತ್ತಾರೆ, ವಾದಿ ನಂಬರ್ 3 ರಿಂದ 6 ರವರು ವಾದಿ ನಂಬರ್ 1

ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂಬರ್ 1 ರವರು ನನ್ನ ತಾಯಿ ಆಗಬೇಕು, ಪ್ರತಿವಾದಿ ನಂಬರ್ 3 ರಿಂದ 8 ರವರು ನನ್ನ ಅಕ್ಕ ತಂಗಿಯರು ಆಗಿರುತ್ತಾರೆ. ನನ್ನ ತಂದೆಯ ಹೆಸರು ನೂರಅಹ್ಮದ್ ಆಗಿರುತ್ತದೆ. ನನ್ನ ತಾತನ ಹೆಸರು ಖಾಸಿಂಸಾಬ ಆಗಿರುತ್ತದೆ. 03 ದಾವಾ ಆಸ್ತಿಗಳು ಮೊದಲು ನನ್ನ ತಂದೆ ನೂರಅಹ್ಮದ್ ಇವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. 03 ದಾವಾ ಆಸ್ತಿಗಳು ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಅವರ ಹೆಸರಿನಲ್ಲಿದ್ದವು ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ನಾನು ಮತ್ತು ನನ್ನ ಅಣ್ಣ ಹಾಗೂ ನನ್ನ ತಾಯಿ ಜೊತೆಗೆ ಇದ್ದೇವು ಎಂದರೆ ಸರಿ. ನಿಮ್ಮ ತಂದೆಗೆ ಸೇರಿದ ಮನೆಗಳಲ್ಲಿ ಈಗಲೂ ಸಹ ನೀವು ಒಂದು ಮನೆಯಲ್ಲಿ ಮತ್ತು ವಾದಿ ಒಂದು ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾರೆಂದರೆ ಸರಿ.

2. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ನಾನು ಮಾನ್ಯ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ್ 50/2020 ರಂತೆ ವಾದಿ ನಂಬರ್ 1 ರಿಂದ 4 ರವರ ವಿರುದ್ಧ ಸಲ್ಲಿಸಿರುತ್ತೇನೆಂದರೆ ಸರಿ. ಸದರಿ ದಾವೆಯು ದಿನಾಂಕ: 20-09-2024 ರಂದು ನೀವು ಹಾಜರಾಗದೇ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಆಸ್ತಿ ನಂಬರ್ 1 ನನ್ನ ತಾಯಿ ನನಗೆ ದಾನಪತ್ರ ಬರೆದುಕೊಟ್ಟಿರುವ ಆಧಾರದ ಮೇರೆಗೆ ನನ್ನ ಪರವಾಗಿ ಆಗಬೇಕೆಂದು ಸಲ್ಲಿಸಿದ್ದು ಅದು ವಜಾ ಆಗಿದೆ ಎಂದರೆ ಸರಿ. ನನ್ನ ತಂದೆ 2003 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿ ನಂಬರ್ -1, 2003 ರಿಂದ 2019-20 ರವರೆಗೆ ಪುರಸಭೆ ದಾಖಲಾತಿಗಳಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು ನನ್ನ ತಾಯಿಯ ಹೆಸರಿಗೆ ಆಗಿದ್ದವು ಎಂದು ಹೇಳುತ್ತಾರೆ. 1993-94 ನೇ ಸಾಲಿನಲ್ಲಿ ನನ್ನ ತಂದೆ ಮೌಖಿಕ ದಾನ ಎಂದು ನನ್ನ

ತಾಯಿ ಹೆಸರಿಗೆ ಆಗಿರುತ್ತದೆ. 1993-94 ನೇಸಾಲಿನಲ್ಲಿ ನಿಮ್ಮ ತಾಯಿ ಹೆಸರಿಗೆ ಆಗಿರುತ್ತದೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿ ಪಿ-1 ಖಾತೆ ಪ್ರಕಾರ ನಿಮ್ಮ ತಂದೆ ನೂರಅಹ್ಮದ್ ಇವರ ಹೆಸರಿಗೆ ಇದ್ದಿದ್ದನ್ನು ರೌಂಡ್ ಮಾಡಿ ನಿಮ್ಮ ತಾಯಿ ಇವರ ಹೆಸರಿಗೆ ಟಿಪ್ಪಣಿ ಮೇರೆಗೆ ಇವರ ಹೆಸರಲೇ ದಿನಾಂಕ: 15-07-1992 ರಂದು ಪಟ್ಟಾವರ್ಗಾವಣೆ ಮಾಡಲಾಗಿದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಮೌಖಿಕವಾಗಿ ದಾನ ಕೊಟ್ಟಿದ್ದಾರೆ ಎನ್ನುತ್ತಾರೆ. ನನ್ನ ತಾಯಿ ಹೆಸರಿಗೆ ಪಟ್ಟಾವರ್ಗಾವಣೆ ಮಾಡಲು ನನ್ನ ತಾಯಿಯವರು ಅರ್ಜಿಯನ್ನು ಕೊಟ್ಟಿರುತ್ತಾರೆ. ನಿಮ್ಮ ತಂದೆ ತೀರಿಕೊಂಡ ಮೇಲೆ ನಿಮ್ಮ ತಾಯಿ ಹೆಸರಿಗೆ ಮುಟೇಶನ್ ಆಗಿದೆ ಎಂದರೆ ಸಾಕ್ಷಿಯು ಇಲ್ಲ ಅವರು ಜೀವಂತ ಇದ್ದಾಗಲೇ ಮುಟೇಶನ್ ಆಗಿದೆ ಎನ್ನುತ್ತಾರೆ.

3. ಪುರಸಭೆ ಕಾರ್ಯಾಲಯದಲ್ಲಿ ನನ್ನ ಮತ್ತು ಅನ್ನ ಅಕ್ಕ ತಂಗಿಯರು ಮತ್ತು ವಾದಿ ನಂಬರ್ 1 ರವರ ಮುಂದೆ ನನ್ನ ತಂದೆ ನನ್ನ ತಾಯಿಯವರಿಗೆ ಮೌಖಿಕ ದಾನವನ್ನು ಮಾಡಿಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಮೌಖಿಕ ದಾನ ಮಾಡುವ ಕಾಲಕ್ಕೆ ಯಾರು ಯಾರು ಸಾಕ್ಷಿದಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ವಾದಿ ನಂಬರ್ 1 ಮತ್ತು ನಿಮ್ಮ ನಡುವೆ ನಿಮ್ಮ ತಾಯಿಯವರನ್ನು ಯಾರು ನೋಡಿಕೊಳ್ಳಬೇಕೆಂದು ಮತ್ತು ಮನೆ ವಿಚಾರಕ್ಕೆ ಆಗಾಗ ಜಗಳ ಆಗುತ್ತಿತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಈ ಕಾರಣಕ್ಕಾಗಿ ನಿಮ್ಮ ತಾಯಿ ಆಸ್ತಿ ಇಬ್ಬರ ಹೆಸರಿನಲ್ಲಿ ಬೇಡ ತನ್ನ ಹೆಸರಿನಲ್ಲಿ ಇರಲಿ ಎಂದು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನೀವು ಪುರಸಭೆ ಕಾರ್ಯಾಲಯದಲ್ಲಿ ನಿಮ್ಮ

ತಂದೆ ನಿಮ್ಮ ತಾಯಿಯವರಿಗೆ ಮೌಖಿಕ ದಾನ ಮಾಡಿ ಪಟ್ಟಾ ವರ್ಗಾವಣೆ ಮಾಡಿರುತ್ತಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 03 ದಾವಾ ಆಸ್ತಿಗಳು ನಿಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಅದರಲ್ಲಿ ನಿಮಗೂ, ಪ್ರತಿವಾದಿಯರಿಗೂ ಮತ್ತು ವಾದಿಯರಿಗೂ ಭಾಗಾಂಶದ ಹಕ್ಕು ಇದೆ ಎಂದರೆ ಸರಿ.

4. ನಿಮ್ಮ ತಾಯಿ ನಿಮ್ಮ ಹೆಸರಿಗೆ ಬರೆದುಕೊಟ್ಟಿರುವ ನಿ ಪಿ 5 ರ ದಾನಪತ್ರದಲ್ಲಿ ವಾದಿಯರ ಮತ್ತು ಪ್ರತಿವಾದಿ ನಂಬರ್ 3 ರಿಂದ 8 ರವರ ಒಪ್ಪಿಗೆ ಪಡೆಯದೇ ಮತ್ತು ಅವರ ಸಹಿಯನ್ನು ಪಡೆಯದೇ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ನನ್ನ 6 ಅಕ್ಕ ತಂಗಿಯರ ಒಪ್ಪಿಗೆ ಇದೆ ಎಂದು ಹೇಳುತ್ತಾರೆ. ನಿ ಪಿ 5 ದಾನಪತ್ರದಲ್ಲಿ ವಾದಿಯ ಒಪ್ಪಿಗೆ ಸಹಿ ಇಲ್ಲ ಎಂದರೆ ಸರಿ. ನಿ ಪಿ 5 ದಾನಪತ್ರದಲ್ಲಿ ಪ್ರತಿವಾದಿ 3 ರಿಂದ 8 ರವರ ಸಹಿಗಳನ್ನು ನಂತರದಲ್ಲಿ ಸೇರಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ನಿಮ್ಮ ಜೊತೆ ವಾಸ ಮಾಡುತ್ತಿದ್ದಾರೆಂದರೆ ಸರಿ. ದಾವಾ ಆಸ್ತಿ ನಂಬರ್ 1 ಬೆಲೆ ಬಾಳುವ ಆಸ್ತಿಯಾಗಿರುವ ಕಾರಣ ಅದನ್ನು ವಾದಿಗೆ ಕೊಡಬಾರದು ಮತ್ತು ನಿಮ್ಮ ಹೆಸರಿಗೆ ಮಾಡಿಸಿಕೊಳ್ಳಬೇಕಂಬ ಉದ್ದೇಶದಿಂದ ನಿಮ್ಮ ತಾಯಿವರಿಗೆ ಮರೆಮಾಚಿ ನಿಮ್ಮ ಹೆಸರಿಗೆ ದಾನ ಪತ್ರ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂಬರ್ 1 ರ ದಾನ ಪತ್ರವನ್ನು ವಾದಿ ನಂಬರ್ 1 ರವರಿಗೆ ಗೊತ್ತಾಗದಂತೆ ನಿಮ್ಮ ಹೆಸರಿಗೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ನನ್ನ ತಾಯಿ ನನ್ನ ಹೆಸರಿಗೆ ಮಾಡಿಸಿದ್ದಾರೆ ಎನ್ನುತ್ತಾರೆ. ದಾನ ಪತ್ರ ಮಾಡಿಕೊಟ್ಟಿರುವ ಮನೆಯಲ್ಲಿ ಈಗ ವಾದಿ ವಾಸ ಮಾಡಿಕೊಂಡಿದ್ದಾನೆ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ ಈಗ ವಾಸ ಮಾಡುತ್ತಿದ್ದಾರೆ

ಎನ್ನುತ್ತಾರೆ. ವಾದಿ ಮೊದಲಿನಿಂದಲೂ ಅದೇ ಮನೆಯಲ್ಲಿ ವಾಸ ಮಾಡುತ್ತಿದ್ದರೂ ನೀವು ಉದ್ದೇಶಪೂರ್ವಕವಾಗಿ ದಾವಾ ಆಸ್ತಿ ಕಬಳಿಸಬೇಕೆಂಬ ವಿಷಯದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ